■ ಶಶಿಕುಮಾರ್ ಸಿ.

# ಮತ್ತೆ ಮುನ್ನೆಲೆಗೆ ಪಿಂಕ್ ಬ್ಯೂಟಿ

ಕೆಲ ತಿಂಗಳುಗಳ ಹಿಂದೆ ಸುದ್ದಿಯಲ್ಲಿದ್ದ ವಾಟ್ಸ್‌ಆ್ಯಪ್ ಪಿಂಕ್ ಮತ್ತೆ ಮುನ್ನೆಲೆಗೆ ಬಂದಿದ್ದು, ಇದನ್ನು ಬಳಸದಂತೆ ರಾಜ್ಯ ಪೊಲೀಸ್ ಇಲಾಖೆ ಎಚ್ಚರಿಕೆ ನೀಡಿದೆ.

'ವಾಟ್ಸ್‌ಆ್ಯಪ್ ಪಿಂಕ್' ಮೋಹಕ್ಕೆ ಬಿದ್ದು ಅದನ್ನು ನಿಮ್ಮ ಮೊಬೈಲ್‌ನಲ್ಲಿ ಡೌನ್‌ಲೋಡ್ ಮತ್ತು ಇನ್‌ಸ್ಟಾಲ್ ಮಾಡಿಕೊಂಡರೆ ಗ್ರಹಚಾರ ನಿಮ್ಮ ಬೆನ್ನೇರಿದೆ ಅನ್ನೋದು ಗ್ಯಾರಂಟಿ. ಯಾಕಂದ್ರೆ ಈ ವಾಟ್ಸ್‌ಆ್ಯಪ್ ಪಿಂಕ್ ಅನ್ನುವುದು ಸೈಬರ್ ಅಪರಾಧಗಳ ಒಂದು ವಿಧವಾಗಿದ್ದು, ಇದು ನಿಮ್ಮ ವೈಯಕ್ತಿಕ ಮಾಹಿತಿ ಸೇರಿದಂತೆ ಇನ್ನಿತರ ಮಾಹಿತಿಯನ್ನು ಸೈಬರ್ ಖದೀಮರ ಪಾಲಾಗಿಸುತ್ತದೆ.

ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ ಎಚ್ಚರಿಕೆ ಸಂದೇಶ ಪ್ರಕಟಿಸಿರುವ ಕರ್ನಾಟಕ ಪೊಲೀಸ್, 'ಗುಲಾಬಿ ಬಣ್ಣದ ವಾಟ್ಸ್‌ಆ್ಯಪ್ ಅಪಾಯಕಾರಿ. ಎಚ್ಚರಿಕೆಯಿಂದಿರಿ. ಆಕರ್ಷಣೆಯ ಗುಲಾಬಿ ಬಣ್ಣದ ವಾಟ್ಸ್‌ಆ್ಯಪ್ ಬಳಸುವವರನ್ನು ಗುರಿಯಾಗಿಸಿ ಮೋಸಗಾರರು ಡೇಟಾ ಕದಿಯಲು ಇಲ್ಲವೇ ಆ್ಯಂಡ್ರಾಯ್ಡ್ ಮೊಬೈಲ್ ಹ್ಯಾಕ್ ಮಾಡಲು ಬಳಸಿಕೊಳ್ಳುತ್ತಾರೆ. ಜಾಗ್ರತೆಯಿಂದಿರಿ' ಎಂದು ಸೂಚಿಸಿದೆ.




'ಆ್ಯಪ್‌ನ ಪೂರ್ವಾಪರ ಪರಿಶೀಲನೆ ಮಾಡದೆ ವಾಟ್ಸ್‌ಆ್ಯಪ್ ಪಿಂಕ್ ಮೇಲೆ ಮೋಹಕ್ಕೆ ಬೀಳುವ ಜನರು ಅದನ್ನು ಡೌನ್‌ಲೋಡ್ ಮಾಡಿ ಇನ್‌ಸ್ಟಾಲ್ ಸಹ ಮಾಡಿಕೊಳ್ಳುತ್ತಾರೆ. ಇದಕ್ಕಾಗಿಯೇ ಕಾಯುವ ಸೈಬರ್ ಖದೀಮರು ಪಿಂಕ್ ವಾಟ್ಸ್‌ಆ್ಯಪ್‌ಗೆ ಕಾಲಿರಿಸಿದವರ ಸ್ಮಾರ್ಟ್‌ಫೋನ್‌ನಲ್ಲಿರುವ ಎಲ್ಲ ವೈಯಕ್ತಿಕ ಮಾಹಿತಿ ಕದ್ದು ದುರ್ಬಳಕೆ ಮಾಡಿಕೊಳ್ಳುತ್ತಾರೆ' ಎಂಬುದು ಪೊಲೀಸ್ ಅಧಿಕಾರಿಗಳ ಮಾತು.

ಒಂದು ವೇಳೆ ವಾಟ್ಸ್‌ಆ್ಯಪ್ ಪಿಂಕ್ ಇನ್‌ಸ್ಟಾಲ್ ಮಾಡಿದ್ದೇ ಆದಲ್ಲಿ ಹ್ಯಾಕರ್‌ಗಳು ನಿಮ್ಮ ಫೋಟೊ, ಕಾಂಟ್ಯಾಕ್ಟ್ಸ್, ನೆಟ್ ಬ್ಯಾಂಕಿಂಗ್ ಪಾಸ್ವರ್ಡ್‌ಗಳು, ಎಸ್‌ಎಂಎಸ್‌ಗಳನ್ನು ಹ್ಯಾಕ್ ಮಾಡಲಿದ್ದಾರೆ. ನಂತರ ಅದನ್ನು ಬಳಸಿಕೊಂಡು ಹಣಕ್ಕಾಗಿ ಪೀಡಿಸುವುದಲ್ಲದೇ, ಇನ್ನಾವುದೋ ಕೃತ್ಯಕ್ಕೆ ನಿಮ್ಮನ್ನು ಸೈಬರ್ ಖದೀಮರು ಬಳಸಿಕೊಳ್ಳುತ್ತಾರೆ. ವಂಚಕರು ನಿಮ್ಮ ಮೊಬೈಲ್‌ನ ಸಂಪೂರ್ಣ ದತ್ತಾಂಶಕ್ಕೆ ಕನ್ನ ಹಾಕುವ ಸಾಧ್ಯತೆ ಇದೆ. ಹೀಗಾಗಿ ಯಾರೂ ಕೂಡ ವಾಟ್ಸ್‌ಆ್ಯಪ್ ಪಿಂಕ್ ಬಳಸಬೇಡಿ. ಒಂದು ವೇಳೆ ಯಾವುದೇ ರೀತಿಯ ಸೈಬರ್ ವಂಚನೆಗೆ ಒಳಗಾದರೆ 1930ಗೆ ಕರೆ ಮಾಡಿ ಎಂದು ಪೊಲೀಸ್ ಇಲಾಖೆ ಸಲಹೆ ನೀಡಿದೆ.

### ಏನಿದು ವಾಟ್ಸ್‌ಆ್ಯಪ್ ಪಿಂಕ್?

ವಾಟ್ಸ್‌ಆ್ಯಪ್ ಹಾಗೂ ಸೋಷಿಯಲ್ ಮೀಡಿಯಾಗಳನ್ನು ಬಳಸಿಕೊಂಡು ಬಳಕೆದಾರರನ್ನು ವಂಚಿಸುವ, ಮೋಸಗೊಳಿಸುವ ದೊಡ್ಡ ಹಗರಣದ ಪ್ರಾರಂಭಿಕ ಹಂತವೇ ಈ ವಾಟ್ಸ್‌ಆ್ಯಪ್ ಪಿಂಕ್. ಇದರ ಲಿಂಕ್ ಇರುವ ಸಂದೇಶಗಳನ್ನು ಸಾಮಾನ್ಯವಾಗಿ ಸ್ಪ್ಯಾಮ್ ಮೆಸೇಜ್‌ಗಳ ಮೂಲಕ ಹರಡಲಾಗುತ್ತದೆ.

ಸಂದೇಶಗಳ ಜತೆ ಲಿಂಕ್ ಲಗತ್ತಿಸಿ ಅದನ್ನು ಕ್ಲಿಕ್ ಮಾಡುವಂತೆ ಸೂಚಿಸಲಾಗುತ್ತದೆ ಹಾಗೂ ಪ್ರೇರೇಪಿಸಲಾಗುತ್ತದೆ. ಲಿಂಕ್ ಕ್ಲಿಕ್ ಮಾಡಿದರೆ ಬಳಕೆದಾರರನ್ನು ಅನಾಮಿಕ/ಅನಧಿಕೃತ ವೆಬ್‌ಸೈಟ್‌ಗೆ ಲಿಂಕ್ ಕಲ್ಪಿಸುತ್ತದೆ. ಅಲ್ಲಿ ಅವರು ವಾಟ್ಸ್‌ಆ್ಯಪ್ ಪಿಂಕ್ ಡೌನ್‌ಲೋಡ್ ಮಾಡಲು ಸೂಚಿಸುತ್ತಾರೆ. ಆದಾಗ್ಯೂ, ಹೊಸ ಫೀಚರ್‌ಗಳು ಅಥವಾ ಥೀಮ್‌ಗಳನ್ನು ಸ್ವೀಕರಿಸುವ ಬದಲು, ಬಳಕೆದಾರರ ಮೊಬೈಲ್‌ಗಳಲ್ಲಿ ಅವರ ಅರಿವಿಗೆ ಬಾರದಂತೆ ದುರುದ್ದೇಶಪೂರಿತ ಸಾಫ್ಟ್‌ವೇರ್ ಡೌನ್‌ಲೋಡ್ ಆಗುವಂತೆ ಮಾಡಲಾಗುತ್ತದೆ. ಈ ಸಾಫ್ಟ್‌ವೇರ್ ಮೂಲಕ ದತ್ತಾಂಶಗಳಿಗೆ ಕನ್ನ ಹಾಕಲಾಗುತ್ತದೆ.

ಫೇಸ್‌ಬುಕ್ ಒಡೆತನದ ವಾಟ್ಸ್‌ಆ್ಯಪ್‌ನಿಂದ ಇಂತಹ ಯಾವುದೇ ಆ್ಯಪ್ ಸಾರ್ವಜನಿಕ ಬಳಕೆಗೆ ಅಭಿವೃದ್ಧಿಪಡಿಸಿಲ್ಲ. ವಾಟ್ಸ್ ಆ್ಯಪ್ ಪಿಂಕ್ ವಾಟ್ಸ್ ಆ್ಯಪ್‌ನ ಹೊಸ ಆವೃತ್ತಿ ಅಥವಾ ವಾಟ್ಸ್ ಆ್ಯಪ್ ಅಧಿಕೃತ ಬಿಡುಗಡೆಯೂ ಅಲ್ಲ. ■

## ಗಡಿಯಾಚೆಗೂ ಯುಪಿಐ

ದೇಶದಲ್ಲಿ ವ್ಯಾಪಕವಾಗಿ ಬಳಕೆಯಾಗುತ್ತಿರುವ ಯುಪಿಐ (ಯುನಿಫೈಡ್ ಪೇಮೆಂಟ್ಸ್ ಇಂಟರ್ಫೇಸ್) ಸೇವೆಗಳನ್ನು ಗಡಿಯಾಚೆಗೂ ಕೊಂಡೊಯ್ಯುವ ನಿಟ್ಟಿನಲ್ಲಿ ರಾಷ್ಟ್ರೀಯ ಪಾವತಿ ನಿಗಮ (ಎನ್‌ಪಿಸಿಐ) ಮುಂದಾಗಿದೆ.

ಎನ್‌ಪಿಸಿಐನ ವಿಭಾಗವಾಗಿರುವ ಎನ್‌ಪಿಸಿಐ ಇಂಟರ್‌ನ್ಯಾಷನಲ್ ಪೇಮೆಂಟ್ಸ್ ಲಿಮಿಟೆಡ್ ಮತ್ತು ಗೂಗಲ್ ಪೇ ಒಡೆತನದ ಗೂಗಲ್ ಇಂಡಿಯಾ ಡಿಜಿಟಲ್ ಸರ್ವೀಸ್ ದೇಶದ ಆಚೆಗೆ ಯುಪಿಐ ಆಧಾರಿತ ಸೇವೆಗಳನ್ನು ಒದಗಿಸುವ ಒಪ್ಪಂದಕ್ಕೆ ಸಹಿ ಹಾಕಿವೆ. ಇದರಿಂದ, ವಿದೇಶಗಳಲ್ಲಿರುವ ಭಾರತೀಯರಿಗೆ, ಭಾರತದಿಂದ ವಿದೇಶಕ್ಕೆ ಪ್ರವಾಸ ಹೋಗುವವರಿಗೆ ದೇಶದಲ್ಲಿರುವಂತೆಯೇ ಡಿಜಿಟಲ್ ಪಾವತಿಗೆ ಅನುಕೂಲವಾಗಲಿದೆ. 'ಪ್ರಮುಖ ಮೂರು ಉದ್ದೇಶಗಳನ್ನು ಒಳಗೊಂಡಂತೆ ಎನ್‌ಪಿಸಿಐ ಜೊತೆ ಈಚೆಗೆ ಒಪ್ಪಂದ ಪತ್ರಕ್ಕೆ (MoU) ಸಹಿ ಹಾಕಲಾಗಿದೆ' ಎಂದು ಗೂಗಲ್ ಇಂಡಿಯಾ ಡಿಜಿಟಲ್ ಸರ್ವೀಸಸ್ ಈಚೆಗೆ ತಿಳಿಸಿದೆ.

### ಉದ್ದೇಶಗಳೇನು?

1) ಹೊರದೇಶಗಳಿಗೆ ಪ್ರಯಾಣಿಸುವ ಭಾರತೀಯರಿಗೆ ಯುಪಿಐ ಸೇವೆಗಳನ್ನು ವ್ಯಾಪಕವಾಗಿ ಒದಗಿಸುವುದು.
2) ಬೇರೆ ಬೇರೆ ದೇಶಗಳಲ್ಲಿಯೂ ಯುಪಿಐ ಬಳಕೆ ಹಾಗೂ ವಹಿವಾಟನ್ನು ವಿಸ್ತರಿಸುವುದು.
3) ಗಡಿಯಾಚೆಗಿನ ಹಣಕಾಸು ವಿನಿಮಯಗಳನ್ನು ಸರಳೀಕರಣಗೊಳಿಸುವುದು.

'ಈ ಒಪ್ಪಂದದನ್ವಯ, ಭಾರತೀಯರು, ವಿದೇಶಿ ವಹಿವಾಟು ಪ್ರಕ್ರಿಯೆ ಸರಳಗೊಳಿಸುವುದು ಮತ್ತು ಯಶಸ್ವಿ ಡಿಜಿಟಲ್ ಪಾವತಿ ವ್ಯವಸ್ಥೆ ನಿರ್ವಹಿಸುವ ಜ್ಞಾನ ಹಾಗೂ ಪರಿಣತಿಯನ್ನು ಇತರ ದೇಶಗಳಿಗೂ ವಿಸ್ತರಿಸಲಾಗುತ್ತದೆ' ಎಂದು ಎನ್‌ಐಪಿಎಲ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿತೇಶ್ ಶುಕ್ಲಾ ಹೇಳಿದ್ದಾರೆ.

ಎನ್‌ಐಪಿಎಲ್‌ಯು ಎನ್‌ಪಿಸಿಐನ ಒಂದು ಅಂಗಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಇದು ಹೊರದೇಶಗಳಲ್ಲಿ ಭಾರತಕ್ಕೆ ಸಂಬಂಧಿಸಿದ ಡಿಜಿಟಲ್ ಪೇಮೆಂಟ್ ವ್ಯವಹಾರಗಳನ್ನು ನಿರ್ವಹಿಸುತ್ತದೆ. ■